22

# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1020 |
| 2 | ಸದಸ್ಯರ ಹೆಸರು | ಶ್ರೀ ಆರ್.ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ಉತ್ತರಿಸುವ ದಿನಾಂಕ | 19.12.2018 |
| 4 | ಉತ್ತರಿಸುವ ಸಚಿವರು | ಕಂದಾಯ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯದಲ್ಲಿ ಹೊಸ ತಾಲ್ಲೂಕುಗಳ ರಚನೆಯಾಗಿದ್ದು, ಸಾರ್ವಜನಿಕರಿಗೆ ಈ ಸ್ವತ್ತಿನ ದಾಖಲೆಗಳನ್ನು ಪಡೆಯಲು ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಬಂದಿದೆ |
| ಆ) | ಯಾವುದೇ ಪರಭಾರೆ ಮಾಡಲು ಹಾಗೂ ಯಾವುದೇ ಆಸ್ತಿಗಳ ಮೇಲೆ ಸಾಲ ತೆಗೆದುಕೊಳ್ಳಲು ಈ ಸ್ವತ್ತು ಕಡ್ಡಾಯವಾಗಿದ್ದು ಹೊಸದಾಗಿ ರಚನೆಯಾಗಿರುವ ತಾಲ್ಲೂಕುಗಳಲ್ಲಿ ಈ ಸ್ವತ್ತು ಪಡೆಯಲು ನಾಗರೀಕರಿಗೆ ತೊಂದರೆಯಾಗಿ ಹಲವಾರು ಜನರು ಸಂಕಷ್ಟದಲ್ಲಿರುವುದರಿಂದ ಸರ್ಕಾರ ಈ ವಿಚಾರವಾಗಿ ತುರ್ತಾಗಿ ತೆಗೆದುಕೊಳ್ಳುವ ಕ್ರಮವೇನು? | ಹೊಸದಾಗಿ ರಚನೆಯಾಗಿರುವ 50 ತಾಲ್ಲೂಕುಗಳ ವ್ಯಾಪ್ತಿಗೆ ಒಳಪಡುವ ಗ್ರಾಮ ಪಂಚಾಯತ್‌ಗಳ ಮರು ವಿಂಗಡಣೆ ಸಂಬಂಧ ಅಧಿಸೂಚನೆ ಇನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಹೊರಡಿಸಿರುವುದಿಲ್ಲ. ಭೂಮಾಪನ ಇಲಾಖೆಯು ಈಗಾಗಲೆ ಹೊಸದಾಗಿ ರಚನೆಯಾಗಿರುವ 50 ತಾಲ್ಲೂಕುಗಳ ಪೈಕಿ 43 ತಾಲ್ಲೂಕುಗಳಲ್ಲಿ ಇ-ಸ್ವತ್ತು ಅರ್ಜಿಗಳನ್ನು ಸ್ವೀಕರಿಸಲು ಮೋಜಿಣಿ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ. ಸದರಿ ತಾಲ್ಲೂಕುಗಳಲ್ಲಿ ಸಮಸ್ಯೆ ಪರಿಹರಿಸಲಾಗಿದೆ. ಉಳಿದ 7 ತಾಲ್ಲೂಕುಗಳಲ್ಲಿ ತಂತ್ರಾಂಶದಲ್ಲಿ ಗ್ರಾಮಗಳ ಮರು ವಿಂಗಡಣೆ ಮಾಡುವ ಕಾರ್ಯ ಪ್ರಗತಿಯಲ್ಲಿರುತ್ತದೆ. ಈ 7 ಹೊಸ ತಾಲ್ಲೂಕುಗಳಿಗೆ ಎರಡು ತಾಲ್ಲೂಕುಗಳಿಂದ ಗ್ರಾಮಗಳನ್ನು ವಿಂಗಡಣೆ ಮಾಡಿ ಹೊಸ ತಾಲ್ಲೂಕು ರಚಿಸಿರುವ ಕಾರಣದಿಂದ ತಂತ್ರಾಂಶದಲ್ಲಿ ಅಳವಡಿಸಲು ಹೆಚ್ಚಿನ ವಿಳಂಬವಾಗುತ್ತಿದೆ. ಶೀಘ್ರವಾಗಿ ಈ ಸಮಸ್ಯೆಯನ್ನು ಬಗೆಹರಿಸಿ, ಸದರಿ ತಾಲ್ಲೂಕುಗಳಲ್ಲೂ ಇ-ಸ್ವತ್ತು ಅರ್ಜಿಗಳನ್ನು ಸ್ವೀಕರಿಸಿ ನಕ್ಷೆ ತಯಾರಿಸಿ ವಿತರಿಸಲು ಮೋಜಿಣಿ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಿಕೊಡಲಾಗುವುದು. |

ಕಂಇ 239 ಭೂದಾಸ 2018

(ಆರ್.ವಿ.ದೇಶಪಾಂಡೆ)
ಕಂದಾಯ ಹಾಗೂ ಕೌಶಲ್ಯಾಭಿವೃದ್ಧಿ
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು